ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಆಹಾರಧಾನ್ಯದ ಕೊರತೆ ಇದೆಯೆಂದು ಹೇಳಿದ್ದೀರಿ. ಆಹಾರಧಾನ್ಯದ ಕೊರತೆ ಇರುವುದರಿಂದ ರೈತರು ಎಣ್ಣಿಕಾಳು, ಹತ್ತಿಕಾಳು ಹಾಕದೆ ಆಹಾರಧಾನ್ಯ ಬೆಳೆಯುವ ದೆಶೆಯಿಂದ ರೈತರಿಗೆ ಪ್ರೋತ್ಸಾಹ ಕೊಡುವ ಸಲುವಾಗಿ, ಪರಿಹಾರ ಅಥವಾ ಸಬ್ಸಿಡಿ ಕೊಡುವ ಯೋಚನೆ ಮಾಡಿದ್ದೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ಸಬ್ಸಿಡಿ ಕೊಡತಕ್ಕ ಯೋಚನೆ ಇಟ್ಟುಕೊಂಡಿಲ್ಲ. ಬೇರೆ ಬೇರೆ ರೀತಿಯಲ್ಲಿ ರೈತನಿಗೆ ಸಹಾಯ ಒದಗಿಸುತ್ತೇವೆ. ಉತ್ತಮವಾದ ಬೀಜಗಳನ್ನು, ಹಾಗೂ ಸುಧಾರಿತ ವ್ಯವಸಾಯದ ಉಪಕರಣಗಳನ್ನೂ ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿ ಕೊಡುವುದಲ್ಲದೆ ಸಸಿ ಸಂರಕ್ಷಣೆ ಬಗ್ಗೆ ಸಹಕಾರಿಯಾಗತಕ್ಕ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಹೀಗೆ ನಾನಾ ರೀತಿಯಲ್ಲಿ ಸಹಾಯವನ್ನು ಸರ್ಕಾರದವರು ರೈತರಿಗೆ ಒದಗಿಸುತ್ತಾರೆ. ಅವುಗಳ ಉಪಯೋಗ ಗಳನ್ನು ಪಡೆದುಕೊಂಡು ರೈತರು ಹೆಚ್ಚಿನ ಉತ್ಪತ್ತಿ ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಪ್ರಕೃತ ಆಹಾರಧಾನ್ಯಗಳ ಕೊರತೆಯನ್ನು ಯಾವಾಗ ತುಂಬ ಬಹುದು ?

ಶ್ರೀ ಹೆಚ್. ಸಿ. ಬೋರಯ್ಯ.—ಅದು ಏನಾಗಿದೆ ಎಂದರೆ, ಯೋಜನೆಗಳನ್ನು ಹಾಕುತ್ತಾ ಹೋಗುತ್ತೇವೆ. ಅವುಗಳನ್ನು ಕಾರ್ಯಗತ ಮಾಡುತ್ತೇವೆ. ಆದರೆ ಅದೇ ಕಾಲದಲ್ಲಿ ಜನಸಂಖ್ಯೆಯೂ ಕೂಡ ಹೆಚ್ಚುತ್ತಾ ಹೋಗುತ್ತದೆ. ನಾವು ಏನೇ ಯೋಜನೆಗಳನ್ನು ಕೈಗೊಂಡರೂ ಋತುಮಾನಗಳ ವೈಪರೀತ್ಯದಿಂದಲೂ ಬಹಳ ತೊಂದರೆಯಾಗುತ್ತದೆ. ರೈತ ಬಾಂಧವರು ಕೆಲಸ ಮಾಡಬೇಕಾಗು ತ್ತದೆ. ಹೀಗೆ ಅನೇಕ ಫ್ಯಾಕ್ಟರ್ಸ್ ಮೇಲೆ ಅವಲಂಬಿಸಿರುತ್ತದೆ. ಒಂದೇ ಮಾರ್ಗವನ್ನು ಅವಲಂಬಿ ಸಿರುವುದಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಯೋಜನೆಗಳಿಂದ ಜನ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಯಾವಾಗ ಕೊರತೆ ತುಂಬಬಹುದು ?

ಶ್ರೀ ಹೆಚ್. ಸಿ. ಬೋರಯ್ಯ.—ಯೋಜನೆಗಳಿಂದ ಹೊಟ್ಟೆಗೆ ಇಲ್ಲದೆ ಜನ ಯಾರೂ ಸಾಯುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕೃತಕ ಗೊಬ್ಬರದ ಕೊರತೆ ಇರುವುದರಿಂದ ಆಹಾರಧಾನ್ಯ ಗಳನ್ನು ಬೆಳೆಯುವುದಕ್ಕೆ ತೊಂದರೆಯಾಗುತ್ತಿದೆ, ಎಂದು ಹೇಳಿದಿರಿ. ಸ್ವಾಭಾವಿಕವಾಗಿ ಮಲ ಮೂತ್ರಗಳು, ದನದ ಗಂಜಲ, ಇವುಗಳ ಶೇಖರಣೆಗೆ ವ್ಯವಸ್ಥೆ ಮಾಡಿದ್ದೀರಾ ? ಅಂತಹ ಶೇಖರಣೆ ಯಿಂದ ನಮ್ಮ ಸಂಸ್ಥಾನಕ್ಕೆ ಗೊಬ್ಬರವನ್ನು ಶೇಕಡಾ ಎಷ್ಟು ಒದಗಿಸುತ್ತಾ ಇದ್ದೀರಿ ?

ಶ್ರೀ ಹೆಚ್. ಸಿ. ಬೋರಯ್ಯ.—ಇದಕ್ಕೆ ಒಂದು ಯೋಜನೆ ಹಾಕಿಕೊಂಡಿದ್ದೇವೆ. ಮಲಮೂತ್ರ ಗಳನ್ನು ಮತ್ತು ಹಸಿರು ಎಲೆಗಳನ್ನು ಸಂಗ್ರಹಿಸಿ ಕಾಂಪೋಸ್ಟ್ ಗೊಬ್ಬರವನ್ನು ತಯಾರು ಮಾಡುವುದಕ್ಕೆ ಕಾಂಪೋಸ್ಟ್ ಸ್ಕೀಂ ಒಂದು ಇದೆ. ಅದಕ್ಕೆ ಹಣವನ್ನು ಹೆಚ್ಚು ಹೆಚ್ಚಾಗಿ ಒದಗಿಸಿದೆ. ಆ ಪ್ರಕಾರ ಕೆಲಸಕಾರ್ಯಗಳು ನಡೆದುಕೊಂಡು ಬರುತ್ತಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆ ರೀತಿ ಎಷ್ಟು ಟನ್ಸ್ ಗೊಬ್ಬರ ತಯಾರು ಮಾಡಿದ್ದೀರಿ ?

ಶ್ರೀ ಹೆಚ್. ಸಿ. ಬೋರಯ್ಯ.—ವಿವರಗಳು ಬೇಕಾದರೆ ಪ್ರತ್ಯೇಕ ಪ್ರಶ್ನೆ ಹಾಕಬೇಕು.

Pay Scales of Lecturers and Professors working in Polytechnics.

*Q.—577. Sri S. RUDRAPPA (Kalgi).—

Will the Government be pleased to state :—

(*a*) whether it is a fact that All India Council of Technical Education have made recommendations regarding pay-scales of Lecturers and Professors working in the Polytechnics in the State ;

(*b*) if so, the action taken or proposed to be taken in this behalf ?

A.—Sri S. R. KANTHI (Minister for Education).—

(*a*) Yes.

(*b*) Orders sanctioning higher scales of pay have been issued.

Sri S. RUDRAPPA.—May I know the number of colleges in which these recommendations have been implemented ?

† Sri S. R. KANTHI.—In the case of Gazetted Officers it is being implemented. Proposals have come to the Government and two of them have already been given AICTE scales of pay. Other cases are being examined. In the case of non-gazetted officers, proposals are yet to come from the Director of Technical Education.

Sri S. RUDRAPPA.—May I know why these recommendations have not been implemented in Hyderabad Karnatak area ?

Sri S. R. KANTHI.—It is not a question of Hyderabad Karnatak area or other area. There is no difference between this area and that area so far as the implementation of these pay scales is concerned. It is being implemented.

Sri SIDDIAH KASHIMATH.—May I know the pay scales recommended by the All-India Council of Technical Education in respect of Lecturers and Professors working in Polytechnics ?

Sri S. R. KANTHI.—I have not got the details. If the Hon'ble Member puts a different question I will certainly answer or I will supply the information if he wants.

Harijan House Building Co-operative Society at Turuvekere.

*Q.—505. Sri B. BYRAPPAJI (Turuvekere).—

Will the Government be pleased to state :—

(*a*) when the Harijan House building Co-operative Society was started at Turvekere Taluk ;

(*b*) what is the amount sanctioned so far to this Society ?

A.—Sri K. PUTTASWAMY (Minister for Co-operation and Housing).

(*a*) On 18-6-1963.

(*b*) Nil.

ಶ್ರೀ ಬಿ. ಬೈರಪ್ಪಾಜಿ.—18-6-1963ರಲ್ಲಿ ಪ್ರಾರಂಭವಾದಂಥ ಹರಿಜನರ ಹೌಸಿಂಗ್ ಸೊಸೈಟಿಗೆ ತಾವು ಇನ್ನೂ ಸಾಲ ಮಂಜೂರು ಮಾಡುತ್ತಾ ಇಲ್ಲವೆಂದು ಹೇಳುತ್ತಿದ್ದೀರಿ. 80 ಸಾವಿರದಷ್ಟು ಸಾಲದ ದರಖಾನ್ತುಗಳನ್ನು ಸರ್ಕಾರಕ್ಕೆ ರಿಕಾರ್ಡು ಮಾಡಿ ಕಳುಹಿಸಿಕೊಟ್ಟು ಎರಡು ವರ್ಷವಾದರೂ ಕೂಡ ಸಾಲ ಇನ್ನು ಮಂಜೂರು ಆಗಿಲ್ಲ ಕಾರಣ ಏನು ?

†ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳತಕ್ಕಂಥ ಸಮಾಚಾರ ಸರಿಯಾದುದಲ್ಲ. ಆ ಸೊಸೈಟಿಯಲ್ಲಿ 217 ಜನ ಮೆಂಬರು ಇದ್ದಾರೆ. 89,600 ರೂಪಾಯಿ ಮೊತ್ತದ 56 ಲೋನ್ ಅಪ್ಲಿಕೇಷನ್ಸ್ 29-10-1965ರಲ್ಲಿ ಕಳುಹಿಸಿಕೊಟ್ಟಿದ್ದಾರೆ. ಹಣ ಇರಲಿಲ್ಲ. ಅದಕ್ಕೆ ಕೊಟ್ಟಿಲ್ಲ. ಈಗಾಗಲೇ ಈ ಸಭೆಗೆ ಏನಂತಿ ಮಾಡಿಕೊಂಡಿದ್ದೇನೆ. ಷೆಡ್ಯೂಲ್ ಕ್ಯಾಸ್ಟ್ ಹೌಸಿಂಗ್ ಕಾರ್ಪೋರೇಷನ್ ಮಾಡಿ, ಈ ಸಭೆ ಒಪ್ಪಿಗೆಯಿಂದ 3½ ಕೋಟಿ ರೂಪಾಯಿ ಸಾಲ ಅದಕ್ಕೆ ಕೊಟ್ಟಿದೆ. ಆ ಹಣ ದಲ್ಲಿ ಕೊಡಬೇಕು.

ಶ್ರೀ ಬಿ. ಬೈರಪ್ಪಾಜಿ.—ಸುಮಾರು ಎರಡು ವರ್ಷದ ಮೇಲೆ ಆಗಿದೆ. ಈಗಲಾದರೂ ತಕ್ಷಣ ಮಂಜೂರು ಮಾಡಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

---

†Indicates that the speeches or remarks have not been revised by the member concerned.